**<u>ಅಸಲು ದಾವಾ ಸಂಖ್ಯೆ- 155/2021</u>** ಪಿ.ಡಬ್ಲ್ಯೂ:- **1**

ದಿನಾಂಕಃ **25-04-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-</u>

ಹಾವೇರಿ ಬಸಪ್ಪ ಬಿನ್ ಮಲ್ಲಪ್ಪ ರವರ ಮಗ ಮಂಜಪ್ಪ ತೀರಿಕೊಂಡಿರುತ್ತಾರೆ. ಮಂಜಪ್ಪರವರಿಗೆ ಇಬ್ಬರೂ ಮಕ್ಕಳು ಅಂದರೆ ದೇವರಾಜ ಮತ್ತು ತಿಮ್ಮಯ್ಯ. ಅದರಲ್ಲಿ ತಿಮ್ಮಯ್ಯ ತೀರಿಕೊಂಡಿರುತ್ತಾರೆ. ದೇವರಾಜರವರಿಗೆ ಚಂದ್ರಕಲಾ ಎಂಬ ಮಗಳು ಇದ್ದಾರೆ. ತಿಮ್ಮಯ್ಯರವರಿಗೆ ಇಬ್ಬರೂ ಮಕ್ಕಳಲ್ಲಿ ಧನು ಎಂಬುವವನ ಹೆಸರು ಗೊತ್ತು. ಇನ್ನೊಬ್ಬನ ಹೆಸರು ನನಗೆ ನೆನಪಿಲ್ಲ. ಮಂಜಪ್ಪನ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮಾವ ನಿಂಗಪ್ಪರವರಿಗೆ ಸಂತಾನ ಇರುವುದಿಲ್ಲ. ಸಂತಾನ ಇಲ್ಲದ ಕಾರಣ ಹನುಮಂತಪ್ಪರವರ ಮಗ ಮಲ್ಲಪ್ಪ ಅಂದರೆ ನನ್ನ ಗಂಡನನ್ನು ದತ್ತು ಪಡೆದುಕೊಂಡಿದ್ದರು ಎಂದರೆ ಸರಿ. ನನ್ನ ಯಜಮಾನರು ಮತ್ತು ರುದ್ರಪ್ಪ ಖಾಸ ಅಣ್ಣ ತಮ್ಮಂದಿರು ಎಂದರೆ ಸರಿ. 1963-64 ನೇ ಸಾಲಿನಲ್ಲಿ ಎಸ್ ಆರ್ ನಂ.2025/1963 ರಂತೆ ವಿಭಾಗ ಆಗಿದೆ ಎಂದರೆ ಸರಿ. ಸದರಿ ಭಾಗಾಂಶದಲ್ಲಿ ಸರ್ವೇ ನಂ.6/2 ರಲ್ಲಿ ಒಟ್ಟು 5 ಎಕರೆ 24 ಗುಂಟೆ ಜಮೀನಿನಲ್ಲಿ 2 ಎಕರೆ 32 ಗುಂಟೆ ಜಮೀನನ್ನು ಮತ್ತು ಸರ್ವೇ ನಂ.85/1 ರಲ್ಲಿ ಒಟ್ಟು 15 ಎಕರೆ 6 ಗುಂಟೆ ಜಮೀನಿನಲ್ಲಿ 3 ಎಕರೆ ಜಮೀನು ನನ್ನ ಯಜಮಾನರ ಭಾಗಾಂಶಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ವಿಭಾಗ ಪತ್ರದ ಬಗ್ಗೆ ದಾವಾ ಪತ್ರದಲ್ಲಿ ನಮೂದಾಗಿರುವ ವಿಚಾರ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.